ಚಿತ್ರದುರ್ಗದ ಡಿಸ್ಟ್ರಿಕ್ಟು.

ಸ್ಯ 1896ನೇ ಇಸವಿ ಜನವರಿ 7ನೇ ಮಂಗಳವಾರದ ದಿವಸ ಚಿತ್ರದುರ್ಗದ ಲೋಕಲ್ ಫಂಡು ಬೋರ್ಡು ಮೀಟಿಂಗಿನ ನಡವಳಿತೆ.

ಹಾಜರು.

ಎಂ. ಎಸ್. ನಾರಾಯಣರಾವ ಯೆಸ್ಕ್ವೈರ್. ಆಕ್ಟಿಂಗ್ ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟಲ್ಲು.

ಅಫಿಷಿಯಲ್ ಮೆಂಬರುಗಳು.		ನಾನ್-ಅಫಿಷಿಯಲ್ ಮೆಂಬರುಗಳು.	
1.	ಮೆಸ್ಸರ್ಸ ಪ್ರಹ್ಲಾದರಾಯರವರು ಎಗ್ಜಿಕ್ಯೂಟಿವ್ ಇಂಜನೀರ್	1.	ಮೆಸ್ಸರ್ ಕ್ಯಾಸಾಪುರ ರಾಮಣ್ಣನವರು ಚಿತ್ರದುರ್ಗದ ತಾಲ್ಲೂಕು ಮೆಂಬರು
2.	,, ರಾಮಾನುಜಯ್ಯಂಗಾರ್ಯರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್	2.	,, ಪಿ. ಸುಬ್ಬಣ್ಣನವರು ಜಳ್ಳಕೆರೇ ತಾಲ್ಲೂಕು ಮೆಂಬರು
3.	,, ಡಬ್ಬ್ಯು. ಶ್ರೀನಿವಾಸಯ್ಯಂಗಾರ್ಯರವರು ಅಸಿಸ್ಟೆಂಟ್ ಜಜ್ಜ್	3.	,, ಪಟೇಲ್ ಕರಿಯಂಣನವರು ಹಿರ್ಯೂರು ತಾಲ್ಲೂಕು ಮೆಂಬರು
4.	,, ಶಿ. ರಾಮಯ್ಯಂಗಾರ್ಯರವರು ಹಿರ್ಯೂರು ತಾಲ್ಲೂಕು ಅಮಲ್ದಾರ್	4.	,, ಪಟೇಲ್ ಭದ್ರಾಮಪ್ಪನವರು ಹೊಳಲ್ಕೆರೇ ತಾಲ್ಲೂಕು ಮೆಂಬರು
5.	,, ಟಿ. ಡಿ. ರಾಮಸ್ವಾಮಯ್ಯನವರು ಚಿತ್ರದುರ್ಗದ ತಾಲ್ಲೂಕು ಅಮಲ್ದಾರ್	5.	,, ಅಶ್ವತ್ಥಪ್ಪನವರು ಜಗಲೂರು ತಾಲ್ಲೂಕು ಮೆಂಬರು
6.	,, ಕೃಷ್ಣರಾಯರವರು ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್		
7.	,, ಶಿ ನರಸಿಂಗರಾಯರವರು ಜಗಲೂರು ತಾಲ್ಲೂಕು ಅಮಲ್ದಾರ್		
8.	,, ಜಿ. ಆರ್. ಶ್ರೀನಿವಾಸಯ್ಯೇಂಗಾರ್ಯವರು ದಾವಣಗೆರೆ ತಾಲ್ಲೂಕು ಅಮಲ್ದಾರ್		
9.	,, ಎಸ್. ಕೃಷ್ಣ ಅಯ್ಯರು ಹೊಳಕಾಲ್ಮೂರು ತಾಲ್ಲೂಕು ಅಮಲ್ದಾರ್		
10.	,, ಡಿ. ನರಸಿಂಗರಾಯರವರು ಜಳ್ಳಕೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್		

ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ಮೆಸ್ಸರ್ ಬಿ. ವೆಂಕಟರಾಮಯ್ಯನವರು ಮತ್ತು ಹರಿಹರ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ವೆಂಕಟೇಶಯ್ಯನವರು ಸಹ ಹಾಜರ್.

I. 1896—97ನೇ ಇಸವಿಯ ಹುಟ್ಟುವಳಿ ಬಡಜಟ್ಟನ್ನ ಓದಲಾಯಿತು.

(1) 96—97ನೇ ಇಸವಿಯಲ್ಲಿ ವಸೂಲಾಗಬಹುದಾದ ಬಂದಾಣಿ ಸೆಸ್ಸನ್ನ 94—95ನೇ ಇಸವಿಯಲ್ಲಿ ಕರಾರುವಾಕಾ ವಸೂಲಾದ್ದನ್ನನುಸರಿಸಿ ದಾಖಲ್ಮಾಡಿದ್ದಾಗಿದೆ ಈ ತದಖೀಲನ್ನೆ A ನಂಬರ್ ನಮೂನೆಯಲ್ಲಿ ವಿವರಿಸಿದೆ.

(2) ಜಮಾಬಾಬಿನ ಇತರ ಐಟಂಗಳನ್ನ 95—96ನೇ ಸಾಲಿಗೆ ಮಂಜೂರಾಗಿರುವ ಎಸ್ಟಿಮೇಟಿನಂತೆ ದಾಖಲ್ಮಾಡಿದೆ.

(3) ಈ ರೀತಿ 96—97ನೇ ಸಾಲಿಗೆ ಒಟ್ಟು 40,430 ರೂಪಾಯಿಗಳು ಹುಟ್ಟುಬಹುದಾಗಿರುತ್ತೆ. 95—96ನೇ ಸಾಲಿಗೆ ಅಂದಾಜ್ 40,255 ರೂಪಾಯಿಗಳು ಮತ್ತು 94—95ನೇ ಸಾಲಿನ ಕರಾರುವಾಕಾ ಹುಟ್ಟುವಳಿ 42,706 ರೂಪಾಯಿಗಳು ಆಗುತ್ತವೆ.

(4) 2—11—95ನೇ ಮಂಕ್ಕಂ 5195—7 L. F. 151—94 ನಂಬರು ಪ್ರೊಸೀಡಿಗ್ಸ್ ಪ್ರಕಾರ 96—97ನೇ ಸಾಲಿನ ಪುರುವಿನಲ್ಲಿ ಬೋರ್ಡು ತರಫು 7,849 ರೂಪಾಯಿಗಳು ಬಾಕಿ ಪುಳೆಯಬಹುದಾಗಿರುತ್ತೆ. ಆದರೆ ಚಿತ್ರದುರ್ಗದ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ 8—11—95ನೇ ಮಂಕ್ಕಂ 364—114ನೇ ನಂಬರು ಲೆಟರ್ ಪ್ರಕಾರ ಚಿತ್ರದುರ್ಗ ಜಳ್ಳಕೆರೆ ರಸ್ತೆಯಲ್ಲಿ ಪ್ರವಾಹದಿಂದ ಕೊಚ್ಚಿಹೋದ ಕೆತಾವೆಯನ್ನು ಕಟ್ಟುಸತಕ್ಕ ಬಗ್ಗೆ ಚಾಲತಿ ಸಾಲಿಗೆ ಬೇಕಾಗುವ 10,62 ರೂಪಾಯಿಗಳನ್ನು ಮೇಲ್ಕಂಡ ಕಿಲ್ತು ಮೊಬಲಗಿನಲ್ಲಿ ವಜಾ ಮಾಡಬೇಕಾಗುತ್ತೆ. ಆದ್ದರಿಂದ 96—97ನೇ ಸಾಲಿನ ಹುಟ್ಟುವಳಿ ದೇಬೀಲ್ ಪಟ್ಟು 47,217 ರೂಪಾಯಿಗಳು ಆಗುತ್ತೆ. ಇದನ್ನ ಪ್ಯಾಸ್ ಮಾಡಬ ಹುದೆಂತ ತೀರ್ಮಾನಿಸಲಾಯಿತು.

II. 96—97ನೇ ಸಾಲಿನಲ್ಲಿ ವಂಠಹಮ್ಮತ್ತು ಇಲಾಖಾ ವ್ಯಾಠಿಕತ್ತು ನಡಿಯಬೇಕಾದ ಕಾಮಗಾರಿಗಳಿಗಾಗಿ ಬೇಕಾಗುವ ಖರ್ಚು ವೊಬಲಗು ಅಂದಾಜ್ ಓದಲಾಯಿತು.

ಒರಿಜನಲ್.

(1) ವಿಜಾಪುರ, ಪುಜ್ಜನಿ ರಸ್ತೆಯಲ್ಲಿ ಕೆಲವು ಸ್ಥಳಗಳಲ್ಲಿ ಮಾಡಬೇಕಾದ ಸ್ಪೆಷಲ್ ಕಾಮಕಾರಿಗಳಿಗಾಗಿ ಸಾಲ್‌ಮಜಕೂರಲ್ಲಿ 1,580 ರೂಪಾಯಿಗೆ ಎಸ್ಟಿಮೇಟು ಮಂಜೂರಾಗಿದೆ ಈ ಸಾಲ್ ಆಬೈರೊಳಗಾಗಿ ಸದರೀ ಅಂದಾಜದಂತೆ ಕಾಮಗಾರಿ ಮುಗಿಯಬಹುದಾಗಿಯೂ ಇರುತ್ತೆ. ಇದಲ್ಲದೆ ಈ ರಸ್ತೆಯನ್ನ ಅಮದುರೆಫ್ಟಿಗೆ ಸರಿಯಾದ ಸ್ಥಿತಿಗೆ ತರಲು ಇನ್ನೂ ಕೆಲವು ಸ್ಥಳಗಳಲ್ಲಿ ಸ್ಪೆಷಲ್ ಕಾಮಗಾರಿ ಆಗತಕ್ಕದ್ದು ಅವಶ್ಯಕವಾಗಿರುತ್ತೆ ಇದನ್ನ ಸಾಲಾಬಾದಿಗೋಸ್ಕರವಾಗಿ ಮಂಜೂರಾಗಿರತಕ್ಕ ಹಣದಿಂದಲೇ ಸರಿಯಾಗಿ ಮಾಡಿಸಲು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಸಾಲಿಗೆ ಈ ಕೆಲಸಕ್ಕಾಗಿ 1,000 ರೂಪಾಯಿ ದಾಖಲ್ಮಾಡಿದೆ.

(2) ಮೇಲ್ಕಂಡ ಸಬಬಿಗಾಗಿಯೇ ಹಾನಗಲ್, ರಾಯದುರ್ಗದ ರಸ್ತೆಯಲ್ಲಿ 96—97ನೇ ಸಾಲಿಗೆ ಮಾಡಬೇಕಾದ ಸ್ಪೆಷಲ್ ಕಾಮಗಾರಿಗಳಿಗಾಗಿ 500 ರೂಪಾಯಿಗಳು ದಾಖಲ್ಮಾಡಿದೆ.

(3) ಹೊಳಲ್‌ಕೆರೆ ಹಳಿಯಾರು ರಸ್ತೆಯಲ್ಲಿ ಅನೇಕ ಸ್ಥಳಗಳಲ್ಲಿ ಕೇತುವೆಗಳು ಕಟ್ಟಿಸತಕ್ಕದ್ದು ಅತ್ಯಾವಶ್ಯಕವಾಗಿರುತ್ತೆ. ಆದರೆ ಹಣವಿಲ್ಲದ್ದರಿಂ ಎಲ್ಲಾ ವಂದೇ ಸರ್ತಿ ಮಾಡಿಸಲು ಅನ್ಕೂಲವಿಲ್ಲದಿದ್ದಾಗ್ಯೂ ಸಾಲೇ ಸಾಲೆ ಸ್ವಲ್ಪ ಸ್ವಲ್ಪ ಹಣಾಕೊಟ್ಟು ಮಾಡಿಸಬೇಕಾಗಿರುತ್ತೆ. 1678 ರೂಪಾಯಿನ ಅಂದಾಜಾಕ್ಕೆ ಹಾಲಿ 2 ಕೇತುವೇ ಕೆಲಸ ನಡಿಯುತ್ತಾ ಇದೆ. ಮುಂದಿನ ಸಾಲಿನಲ್ಲಿ ಇನ್ನೊಂದು ಕೇತುವೇ ತಯಾರಿಗ್ಕೋಸ್ಕರ 500 ರೂಪಾಯಿ ದಾಖಲ್ಮಾಡಿದೆ.

(4) ಚಿತ್ರದುರ್ಗದ ತಾಲ್ಲೂಕು ತುರುವನೂರು ಗ್ರಾಮವು ಬಹಳ ದೊಡ್ಡದಾಗಿಯೂ ಜನಭರಿತವಾಗಿಯೂ ಇರುತ್ತದೆ ಜನ, ಜಾನುವಾರುಗಳಿಗೆ ಸಮೀಪದಲ್ಲಿ ನೀರಿನ ಅನ್ಕೂಲತೆ ಇಲ್ಲ ಆದ ಪ್ರಯುಕ್ತ ಈ ಗ್ರಾಮದಲ್ಲಿ ಬಂದು ಕುಡಿಯುವ ನೀರಿನ ಕೆರೆಯನ್ನು ಕಟ್ಟಿಸುವದಕ್ಕಾಗಿ 96—97ನೇ ಸಾಲಿಗೆ 2,000 ರೂಪಾಯಿ ಕೇರಿಸಿದೆ ಇದಕ್ಕಾಗಿ ಇಂಜನೀರ್ ಇಲಾಖೆ ಇಂದ ಬಂದು ಅಂದಾಜ್ ತಯಾರಾಗುತ್ತಾ ಇದೆ.

(5) ಆಣಜೀ ದಾವಣಗೆರೆ, ರಸ್ತೆಯನ್ನು ಜಾಗ್ರತೆ ಪೂರೈಸತಕ್ಕದ್ದು ಆವಶ್ಯಕವೆಂದು ಬೋರ್ಡಿನವರು ಅಭಿಪ್ರಾಯ ಪಟ್ಟಿದ್ದಾಗ್ಯೂ 96—97ನೇ ಸಾಲಿಗೆ 3,000 ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಈ ರಸ್ತೇ ಕೆಲಸಕ್ಕೆ ಕೊಡಲು ಅನುಕೂಲವಿಲ್ಲದ್ದರಿಂದ ಸದರೀ ಮೊಬಲಗು ದಾಖಲ್ಮಾಡಿದೆ.

ರಿಪೇರಿ.

(1) ಪ್ರಾವಿಷಿಯಲ್ ಫಂಡಿಗೆ ವರ್ಗಕೊಟ್ಟ ಚಿತ್ರದುರ್ಗ, ಚಂಡೀಪುರದ ರೋಡಿಗೆ ಬದಲಾಗಿ ಬೋರ್ಡಿನವರು ತೆಗದುಕೊಂಡ ಚಿತ್ರದುರ್ಗ, ಜಳ್ಳಕೆರೆ ರೋಡು ಸಹ ಬಹಳ ಮುಖ್ಯವಾದದ್ದಾಗಿದೆ. ಸದರೀ ರೋಡಿನಲ್ಲಿನ ಆವುದಾರಪ್ಪು ಚಂಡೀಪುರದ ರೋಡಿನಲ್ಲಿರತಕ್ಕ ಆವುದಾರಫ್ಟಿಗೆ ಯಾವ ವಿಧದಲ್ಲಿಯೂ ಕಮ್ಮಿ ಇಲ್ಲ ಆದ್ದರಿಂದ ಹಾಲಿ ಇರುವ ಮೈಲೇಜು ರೇಟು 100 ರೂಪಾಯಿನಲ್ಲಿ ರೋಡನ್ನು ಆಬಾದು ಸ್ಥಿತಿಯಲ್ಲಿಡಲು ಆಗುವದಿಲ್ಲ ಆದ್ದರಿಂದ ಹಾಲಿ ಇರತಕ್ಕ ದಾವನ್ನು ಮೈಲಿ 1ಕ್ಕೆ 120 ರೂಪಾಯಿನಂತೆ ಹೆಚ್ಚಿಸಬೇಕಾಯಿತು.

(2) ಮೊಳಕಾಲ್ಮುರು ತಾಲ್ಲೂಕು ರಾಂಪುರದಲ್ಲಿರತಕ್ಕ III‌ನೇ ಕ್ಲಾಸ್ ಬಂಗ್ಲೆಯು ಬಹಳ ನಾದುರಸ್ತು ಸ್ಥಿತಿಯಲ್ಲಿರುತ್ತೆ ಆದ್ದರಿಂದ ಅದರ ರಿಪೇರಿಗೆ 828 ರೂಪಾಯಿ ದಾಖಲ್ಮಾಡಿದೆ.

(3) ಈ ಬಾಬಿನಲ್ಲಿ 96—97ನೇ ಸಾಲಿಗೆ ವಟ್ಟು 14,108 ರೂಪಾಯಿ ಖರ್ಚು ಆಗತಕ್ಕದ್ದಾಗಿದೆ.

ನವುಕರ ಮಾನೇರ ತಲಬು.

ಗವರ್ನಮೆಂಟು 23—10—95ನೇ ಮತ್ತು ಂ 4449—58—L. F. 210—92ನೇ ನಂಬರು ಪ್ರೊಸೀಡಿಂಗ್ಸು ಪ್ರಕಾರ ವೊಟ್ಟು ಖರ್ಚಿನ ಮೇಲೆ ಶೇಕಡಾ 17½ ರೂಪಾಯಿ ಪ್ರಕಾರ ನವುಕರ ಮಾನೇರ ತಲಬಿಗಾಗಿ, 3,692 ರೂಪಾಯಿ ದಾಖಲ್ಮಾಡಿದೆ.

ಆಹನಿ ಸಾಮಾನು ವಗೈರೆ.

ಆಹನೀ ಸಾಮಾನುಗಳ ಬಗ್ಯಾಗಿ 100 ರೂಪಾಯಿ ಕೇರಿಸಿರುತ್ತೆ.

ಈ ರೀತಿ ಮರಹಂಮತ್ತು ಇಲಾಖಾ ಮಾರಿಫತ್ತು ನಡಿಯತಕ್ಕಂಥ ಕಾಮಗಾರಿಗಳಿಗಾಗಿ 96—97ನೇ ಸಾಲಿಗೆ ತಗಲಬಹುದಾದ ವಟ್ಟು ಖರ್ಚು 24,900 ರೂಪಾಯಿ ಆಗುತ್ತೆ. ಇದನ್ನ ಅಂಗೀಕರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

III. 96—97ನೇ ಸಾಲಿಗೆ ಡಿಸ್ಪೆನ್ಸ್ಕ್ಟ್ರಿ ಫಂಡಿಗೆ ಖರ್ಚು ಬೀಳತಕ್ಕ ಆಸ್ಪತ್ರೆ ಖರ್ಚು ವಗೈರೆ ಸಿವಿಲ್ ಥಾಜಿನ ಬಾಬತು ಅಂದಾಜ್ ಪಟ್ಟಿ ಓದಲಾಯಿತು.

(1) ಗವರ್ನಮೆಂಟ್ ಪ್ರೆಸ್ಸಿನಿಂದ ಬರತಕ್ಕ ಫಾರಂಗಳ ಬಾಬತು ಗಾಡೀ ಬಾಡಿಗೆ ರೈಲ್ ಚಾರ್ಜು ವಗ್ಗೈರೆ ಬಗ್ಯೆ ಮತ್ತು ಡಿಸ್ಪೆನ್ಸ್ಕ್ಟ್ರಿ ಆಫಿಸ್ ಲೋಕಲ್ ಫಂಡ್ ಇಲಾಖೆಗೆ ಬೇಕಾಗುವ ಚಿಲ್ಲರೆ ಸಾಮಾನುಗಳು ಕೊಂಡುಕೊಳ್ಳುವ ಬಗ್ಯೆ ಸಹ ಮಾಹೆಯಾನಾ 3 ರೂಪಾಯಿನಂತೆ ಸಾದಿಲ್‌ವಾರು ದಾಖಲ್ಮಾಡಿದೆ.

(2) (a) ಹರಿಹರದ ಸಬ್ ತಾಲ್ಲೂಕು ಮಲೆಬೆನ್ನೂರಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಆಸ್ಪತ್ರೆಯನ್ನು ಪೊನ್ನಪ್ಪನಾಯಿಡರವರ ಛತ್ರದಲ್ಲಿಡಬೇಕೆಂದು ಯೋಚಿಸುತ್ತಾದ್ದರಿಂದ ಇದಕ್ಕಾಗಿ ಜಾಲ್ತಿ ಸಾಲಿಗೆ ಮನೆ ಬಾಡಿಗೆ ಕೇರಿಸಲಿಲ್ಲ ಆದರೆ ಸದರೀ ಛತ್ರವು ಅನುಕೂಲವಿಲ್ಲವೆಂದು ಈಚೆಗೆ ತೋರಿ ಸದರೀ ಆಸ್ಪತ್ರೆ ಮಾಡಲು ಮಾಹೆಯಾನಾ 5 ರೂಪಾಯಿ ಬಾಡಿಗ್ಯೆ ಬಂದು ಮನೆಯನ್ನು ನಿಷ್ಕರ್ಷೆ ಮಾಡಿ ಆ ಬಗ್ಯಾಗಿ 40 ರೂಪಾಯಿ ದಾಖಲ್ಮಾಡಿದೆ.

(b) ತಾಲ್ಲೂಕು ಜಾತಗಳಲ್ಲಿರತಕ್ಕ ಲೋಕಲ್ ಫಂಡ್ ಆಸ್ಪತ್ರೆಗಳಿಂದ ಚಿತ್ರದುರ್ಗದಲ್ಲಿರುವ ಸಿವಿಲ್ ಆಸ್ಪತ್ರೆಗೆ ಚಿಕಿತ್ಸೆ ಬಗ್ಯೆ ಕಾಯಿಲೆಯವರನ್ನು ಅವಶ್ಯಕ ಬಿದ್ದಾಗ ರವಾನೆ ಮಾಡಲು ಬೇಕಾಗುವ ಗಾಡಿಬಾಡಿಗೆ ಮತ್ತು ಇತರ ಖರ್ಚಿಗಾಗಿ 50 ರೂಪಾಯಿ ಕೇರಿಸಿದೆ ಈ ತರಹೆ ಖರ್ಚಿನ ಸಂದರ್ಭ ಜಾಲ್ತಿ ಸಾಲಿನಲ್ಲಿ ವದಗಿದ್ದದ್ದರಿಂದಲೂ ಮತ್ತು ಆಸ್ಪತ್ರೆಗಳಿಗೆ ಸಾಲಿ ಕೊಟ್ಟಿರುವ ಸಾದಿಲ್‌ವಾರು ಮೊಬಲಗು ಆಸ್ಪತ್ರೆಗಳಿಗೆ ಬೇಕಾದ ಸಾಮಾನುಗಳನ್ನು ಮತ್ತು ಅಂಗಡಿ ಅವ್ಷಧಗಳನ್ನು ತೆಗದುಕೊಳ್ಳುವದಕ್ಕೆ ವಟ್ಟಿಗೆ ಸಾಕಾಗುವಷ್ಟು ಇದ್ದ ಮೇಲೆ ಹೇಳಿದ ತರಹೆ ಖರ್ಚಿಗೆ ಪುಳಿಯುವದಿಲ್ಲವೆಂದು ಆಸ್ಪೆಂಟ್ ಸರ್ಜ್ ಸುಪೆರಿಂಟೆಂಡರವರು ಅಭಿಪ್ರಾಯ ಪಟ್ಟಿದ್ದರಿಂದಲೂ ಸದರಿ 50 ರೂಪಾಯಿ ದಾಖಲ್ಮಾಡತಕ್ಕ ಅವಶ್ಯಕ ತೋರಿಬಂತು.

(3) 95—96ನೇ ಸಾಲಿಗೆ ಆಗ್ಯೆ ನವುಕರಿ ಮೇಲೆ ಇದ್ದ 5 ಜನ ಸೂಲಗಿತ್ತಿಯರ ತಲಾ ಪೊತ್ತು ಅಲೋವೆನ್ಸ್ ಬಗ್ಯೆ ಮಾತ್ರ ಬೇಕಾದ ಮೊಬಲಗು ದಾಖಲ್ಮಾಡಿತ್ತು.

ಡಿಸ್ಪೆನ್ಸ್ಕ್ಟ್ರಿ ಮಜಕೂರಿಗೆ ಬೇಕಾದ ವಟ್ಟು ಇಸಂಗಳು ಸಧ್ಯವಲ್ಲಿ ಭರ್ತಿ ಆಗುವದ್ದರಿಂದ ಅವರುಗಳ ತಲಬು ವಗ್ಗೈರೆ ಬಗ್ಯೆ ಬೇಕಾಗುವ ಮೊಬಲಗನ್ನು ಮುಂದಿನ ಸಾಲಿಗೆ ಕೇರಿಸುವದ್ದರಿಂದ ಜಾಸ್ತಿಯಾಗಿರುತ್ತೆ.

(4) (a) ಹೊಳಲ್‌ಕೆರೆ ತಾಲ್ಲೂಕು ರಾಮಗಿರಿಯಲ್ಲಿನ ಮುನಸಾಫಕಛೇರಿಯಲ್ಲಿ ಪ್ರಯೋಜನೀಕರು ಯಾರೂ ಪುಳಿಯುವದಿಲ್ಲ ಲೋ

ಲ್ಮಾರೂ ತಾಲ್ಲೂಕು ಅಮಕುಂದಿಯಲ್ಲಿ ಹೊಸದಾಗಿ ಕಟ್ಟಿಸಿರತಕ್ಕ ರೆಸ್ಟ್ ಹೌಸ್ ವುಸ್ತುವಾರೀ ಬಗ್ಯೆ ಮಾಹೆಯೂನಾ 3 ರೂ ಪಾಯಿ ತಲಬಿನ ಮೇಲೆ ಬಂದು ಇಸಂ ನೇಮಿಸಬೇಕಾಗಿರುತ್ತೆ.

ಹೊಸದುರ್ಗದ ಮುಸಾಫರ್‌ಖಾನೆಗೆ ಮಾಹೆಯ್ಯೂನಾ 4 ರೂಪಾಯಿ ತಲಬಿನ ಮೇಲೆ ವಬ್ಬ ಝೂಡ್ಮಾಲೀ ಇಸಂ ಮಂಜೂರಾಗಿರುವ ಪ್ರಕಾರ 96—97ನೇ ಸಾಲಿನ ಬಡಿಜಟ್ಟಿನಲ್ಲಿ ದಾಖಲ್ಮಾಡಿಥೆ.

ಈ ಬೂಜೂದಲ್ಲಿ ನಮೂದಿರುವ ರೆಸ್ಟ್ ಹೌಸ್ ಮತ್ತು ಮುಸಾಫರ್‌ಖಾ ನೆಗಳಿಗಿರುವ ವುಸ್ತುವಾರೀ ಇಸಂಗಳ ತಲಬು ಬಹಳ ಕಡಮೆ ಆಗಿರುವದ್ದರಿಂ ದ ಅವರುಗಳ ತಲಬನ್ನು ಫೀ ಇಸಂ 2 ರೂಪಾಯಿನಿಂದ 3 ರೂಪಾಯಿಗೆ ಹೆಚ್ಚಿನಬೇಕೆಂದು ಬೋರ್ಡಿನವರು ಸಿಫಾರಸ್ ಮಾಡುತ್ತಾರೆ.

ರೆಸ್ಟ್‌ಹೌಸ್

1 ಚಿತ್ರದುರ್ಗದ ತಾಲ್ಲೂಕು ಕಲ್ಲಹಳ್ಳಿ
2 ಹೊಳಲ್ಕೆರೇ ತಾಲ್ಲೂಕು ಕೊಟ್ಟಿಗೆ
3 ಮೊಳಕಾಲ್ಮೂರು ತಾ|| ತಮ್ಮೇನಹಳ್ಳಿ

ಮುಸಾಫರ್‌ಖಾನೆ

4 ಚಿತ್ರದುರ್ಗದ ತಾಲ್ಲೂಕು ವಿಜಾಪುರ

(b) ಬಂಗ್ಲೆಗಳು ಮತ್ತು ಮುಸಾಫರ್‌ಖಾನೆಗಳಿಗೆ ಜೇಕಾಗುವ ಕಬ್ಬಿಣದ ಕೊಡ ಹಗ್ಗ ವಗೈರೆಗಳ ಬಗ್ಯೂ ಈ ಕಟ್ಟಡಗಳ ಬಾಗಲು ಮತ್ತು ಕಿಟಕಿಗಳ ಚಿಲ್ಲರೆ ರಿಪೇರಿ ಸಂಬಂಧದ ಖರ್ಚಿನ ಬಗ್ಯೂ 50 ರೂಪಾಯಿ ದಾಖಲ್ಮಾಡಿಸಥೆ.

ಇವುಗಳೇ ಬಂಗ್ಲೆ ಮತ್ತು ಮುಸಾಫರ್‌ಖಾನೆ ಹೆಡ್ಡುಗಳಲ್ಲಿ ಜಾಸ್ತೀಮೊಬಲಗು ದಾಖಲಾಗಿರುವದಕ್ಕೆ ಕಾರಣಗಳಾಗಿರುತ್ತವೆ.

(5) ಹಣ ಸಾಲದ್ದರಿಂದ ಗ್ರಾಮಾಂತರ್‌ಗಳಲ್ಲಿ ನಡಿಯಜೇಕಾದ ಆರೋಗ್ಯಾಭಿವೃದ್ಧಿ ಕಾಮಗಾರಿಗಳಿಗೂ ಮತ್ತು ಗ್ರಾಮ ಪಾ ಕೇಜ್ ಝೂಡಮಾಲಿಗಳ ತಲಬು ಬಗ್ಯೂ 1,432 ರೂಪಾಯಿಗಿಂತಲೂ ಜಾಸ್ತಿಯಾಗಿ ದಾಖಲ್ಮಾಡಲು ಅನುಕೂಲವಿಲ್ಲ.

(6) ಬೂಕೀ ಬಾಬುಗಳ ವಿಷಯದಲ್ಲಿ ಸ್ಪೆಷಲಾಗಿ ಹೇಳತಕ್ಕದ್ದೇನೂ ಇರುವದಿಲ್ಲ.

(7) ಈ ಸಿವಿಲ್ ಛಾರ್ಜಿನ ಒಟ್ಟು ಮೊಬಲಗು 12,117 ರೂಪಾಯಿ ಆಗುತ್ತೆ.

ಇದನ್ನ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IV. ಅಮಲ್‌ದಾರ್‌ಗಳಿಂದ ತಯಾರ್ಮಾಡಲ್ಪಟ್ಟ ಕಾಮಗಾರಿಗಳ ಪಟ್ಟಿಗಳನ್ನು ಓದಲಾಯಿತು.

96—97ನೇ ಸಾಲಿನಲ್ಲಿ ರೆವಿನ್ಯೂ ಇಲಾಖೆಯಿಂದ ನಡಿಸತಕ್ಕ ಕಾಮಗಾರಿಗಳಿಗಾಗಿ 3000 ರೂಪಾಯಿ ದಾಖಲ್ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು ಫಂಡಿಗೂ ಸಾಲದ್ದರಿಂದ ಇಪ್ಪು ಸ್ವಲ್ಪ ಮೊಬಲಗು ದಾಖಲ್ಮಾಡಬೇಕಾಯಿತು ಜರೂರಿಯಾತ್ ಅನುಸರಿಸಿ ನಡಿಯಜೇಕಾದ ಕಾಮಗಾರಿಗಳೆಲ್ಲಾ ತಪ್ಶೀಲ್ ಅಂದಾಜಾಗಳು ಗವರ್ಮೆಂಟ್ ಮಂಜೂರಿ ಬಗ್ಯೆ ಕಳುಹಿಸಲ್ಪಡತಕ್ಕದ್ದು ಹಾಲಿ ನೇಮಕವಾಗಿರುವ 2 ಮೇಸ್ತ್ರೀ ಇಸಂಗಳ ತಲಬಿಗಾಗಿ ಡಿಸ್ಟ್ರಿಕ್ಟ್ ಫಂಡಿನಿಂದ 200 ರೂಪಾಯಿ ದಾಖಲ್ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

V. ಈ ಕೆಳಗೆ ತೋರಿಸುವ ಪ್ರಕಾರ 96—97ನೇ ಸಾಲಿಗೆ ಎಲ್ಲಾ ಬಾಬುಗಳ ಖರ್ಚು ಕೇರಿ 40,217 ರೂಪಾಯಿಯೂ ಸೆಸ್ ಆಫೈರಿಗೆ ಕಲ್ತು 7,000 ರೂಪಾಯಿದೂ ಆಗುತ್ತೆ.

ಹಿಂದಿನ ಕಲ್ತು	6,787
96—97ನೇ ಸಾಲಿನ ಹುಟ್ಟುವಳಿ	40,430
	47,217

ಖರ್ಚು	ಜುಮ್ಲಾ	ರೂ.
(A.) ಮರಹಮ್ಮತ್ ಇಲಾಖಾ ಮೂರೀಫತ್ತು ನಡಿಯಜೇಕಾದ ಕಾಮಗಾರಿಗಾಗಿ		24,900
(B.) ರವಿನ್ಯೂ ಇಲಾಖಾ		3,200
(C.) ಸಿವಿಲ್ ಛಾರ್ಜ್		12,117
	ಜುಮ್ಲಾ	40,217
	ಕಲ್ತು	7,000

VI. ಕೇವಲ ಅವಶ್ಯಕವಾಗಿರುವ ಖರ್ಚಿನ ಬಗ್ಯಾಗಿ ದಾಖಲ್ಮಾಡಿರುವ ಮೇಲ್ಕಂಡ ಮೊಬಲಗುಗಳನ್ನು ವ್ಯಾಸ್‌ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಜಾಲ್ತಿ ಸಾಲಿಗೆ ಲೋಕಲ್‌ಫಂಡ್ಸ್ ಜನರಲ್‌ನಿಂದ ಹೊಸದಾಗಿ ಹಣ ಕೊಡಲು ಆಗುವದಿಲ್ಲವೆಂದು ಗವರ್ಮೆಂಟಿನವರು ಮಾಡಿರತಕ್ಕ ಆರ್ಡರನ್ನ ಈ ಡಿಸ್ಟ್ರಿಕ್ಟು ವಿಚಾರದಲ್ಲಿ ಮಟ್ಟಿಗೆ ಪುನರಾಲೋಚನೆಗೆ ತೆಗದುಕೊಳ್ಳಬೇಕೆಂದು ಜನರಲ್ ಸೆಕ್ರಿಟರಿ ಸಾಹೆಬರವರಿಗೆ ಡೆಪ್ಯುಟಿ ಕಮ್ಮಿಷನರವರು ಬರಸಿರುವ 12—11—95ನೇ ಮತ್ತು ಂ 367—115ನೇ ನಂಬರ್ ಲೆಟರ್ ಓದಲಾಯಿತು.

ಹಣವಿಲ್ಲದ್ದಕ್ಕಾಗಿ ಮಾಡಿಸಬೇಕೆಂದು ಯೋಚಿಸಿದ್ದ ಅನೇಕ ಪಾಕೀಜಾ ಕಾಮಗಾರಿಗಳು ಹಾಲಿ ನಿಂತು ಹೋಗಿರುವದ್ದರಿಂದ ಈ ವಿಷಯದಲ್ಲಿ ಪುನಹ ಗವರ್ಮೆಂಟಿಗೆ ಬರಸಬೇಕೆಂದು ತೀರ್ಮಾನಿಸಲಾಯಿತು.

ಎಂ. ಎಸ್. ನಾರಾಯಣರಾಯರು,
ಆ. ಡೆಪ್ಯುಟಿ ಕಮ್ಮಿಷನರ್, ಮತ್ತು ಪ್ರಸಿಡೆಂಟ್.

ಸ್ವಂತಪ್ರಕಟನೆ.

ನೋಟಿಸ್.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದ್ದೂರಲ್ಲಿರುವ ಯಡತೊರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,—ನಾನು ಮಂಡ್ಯದ ತಾಲ್ಲೂಕು ಸರ್ವಮಾನ್ಯ ಕೆಸ್ತೂರು ಅಲ್ಲರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಹ್ಮಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಆಕ್ಟೋಬರ್ 21ನೇ ಮತ್ತು ಂ ಜನರಲ್ ಪವರಾಫ್ ಆಟರ್ನಿ ಪೋಟ್ಟು ಮೊಕ್ತ್ಯಾರ್‌ನಾಮೆಯನ್ನು ನಾನು ರದ್ದುಪಡಿಸಿರುವದರಿಂದ ಈ ತಾರೀಖು ಆಗಾಯುತು ಮುಂದೆ ನನಿಗೋಸ್ಕರ ಅವರಲ್ಲಿ ಯಾವವಿಧವಾದ ಲೇವಾದೇನಿ, ಲೆಕ್ಕಾಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.